# ಹರಿ ಕೊಟ್ಟ ಕಾಲಕ್ಕೆ ಉಣಲಿಲ್ಲ..

ಲೋಭತನವನ್ನು ಶ್ರೇಷ್ಠವೆಂದು ಜಗತ್ತಿನ ಯಾವ ಮೂಲೆಯ ಯಾವ ಧರ್ಮವೂ ಹೇಳಿಲ್ಲ. ಲೋಭಿಯು ಸಮಾಜಘಾತುಕನೂ ಕುಟುಂಬ ಪೀಡಕನೂ ಹೃದಯ ಹೀನನೂ ಆಗಿರುತ್ತಾನೆ. ಅವನು ತಾನೂ ತಿನ್ನ; ಪರರಗೂ ಉಣಲು ಬಿಡ. ಅವನು ಆತ್ಮವಂಚಕ; ತಾನೇನು ಮಾಡುತ್ತಿದ್ದೇನೆಂಬ ವಿವೇಚನೆ ಅವನಲ್ಲಿ ಸುಳಿಯದು. ಆ ಬಗ್ಗೆ ಪರರು ನೀತಿಬೋಧನೆ ಮಾಡಿದಾಗ ಅದಕ್ಕೆ ಅವನು ಕಿವುಡನಾಗುತ್ತಾನೆ ಹಾಗೂ ಅವರ ಮೇಲೆ ಹರಿಹಾಯ್ದು, ಅವರು ಸ್ವಾರ್ಥಿಗಳೆಂದೂ ತನ್ನ ಹಣ ದೋಚಲು ಕಾಯುತ್ತಿರುವ ಕಳ್ಳರೆಂದೂ ಆರೋಪ ಮಾಡುತ್ತಾನೆ. ಅವನು ಕಾಸಿಗೆ ಕಾಸು ಕೂಡಿಹಾಕಿ ಅದರ ಲೆಕ್ಕದಲ್ಲಿ ಆನಂದ ಕಾಣುತ್ತಾನೆ. ಇದನ್ನೇ ನಮ್ಮ ಕವಿಗಳು ಮತ್ತು ದಾರ್ಶನಿಕರು 'ಲಕ್ಷ್ಮೀ ಮೋಹ'ವೆಂದು ಕರೆದು 'ತಪ್ಪು' ಎಂದು ತಿಳಿಸುತ್ತಾರೆ.

ನಮ್ಮ ದಾಸ ಶ್ರೇಷ್ಠರಾದ ಪುರಂದರದಾಸರು ಲೋಭಿಯನ್ನು, ಅವನ ಲೋಭತನವನ್ನು ವಿಡಂಬಿಸುತ್ತಾರೆ:

ಹರಿ ಕೊಟ್ಟ ಕಾಲಕ್ಕೆ ಉಣಲಿಲ್ಲ ಉಡಲಿಲ್ಲ
ಹರಿ ಕೊಡದ ಕಾಲಕ್ಕೆ ಬಾಯಿ ಬಿಡುವ್ಯಲ್ಲೋ ಪ್ರಾಣಿ!
ಮತ್ತೆ ಉಪ್ಪಿಲ್ಲದೆ ಉಂಡ್ಯಲ್ಲೋ ಪ್ರಾಣಿ!
ಹತ್ತು ಸಾವಿರ ಹೊನ್ನು ತಿಪ್ಪೇಲಿ ಪೋಪಾಗ
ಮೃತ್ತಿಕೆ ಬಾಯಲ್ಲಿ ಬಿತ್ತಲ್ಲೋ ಪ್ರಾಣಿ!

ತನ್ನ ಲೋಭತನದಿಂದ ಉಣ್ಣದೆ ಉಡದೆ ಹೂತಿಟ್ಟ ಹಣವು ಒಂದಲ್ಲ ಒಂದು ದಿನ ಪರರ ಪಾಲಾಗೇ ಆಗುತ್ತದೆ. ಆಗ ಅತ್ತು ಏನು ಪ್ರಯೋಜನ? ಆಗ ಉಪ್ಪಿಗೂ ಗತಿಯಿಲ್ಲದೆ ಹಲುಬಿದರೆ ಏನು ಬಂತು? ಹೂತಿಟ್ಟ ಹಣ ತಿಪ್ಪೆಗೆ (ಕಸಕ್ಕೆ) ಸಮ. ಅದು ಕಸವಾಗಿ ಹೊರಟು ಹೋಗುತ್ತದೆ. ಆಗ ಮನುಷ್ಯ ಪ್ರಾಣಿ ಹುಲ್ಲು ತಿನ್ನಬೇಕಾಗುತ್ತದೆಯೆಂದು ಪುರಂದರದಾಸರು ಜೀವನ ಮೀಮಾಂಸೆ ಮಾಡುತ್ತಾರೆ. ಪುರಂದರದಾಸರ ಆಸ್ತಿಕ ಮನೋಧರ್ಮವನ್ನು ಮತ್ತು ದೈವ ಸಂಕಲ್ಪ ನಂಬಿಕೆಯನ್ನು ಪಕ್ಕಕ್ಕಿಟ್ಟು ತುಸು ಅವರ ಮಾತುಗಳನ್ನು ಅರ್ಥೈಸಿಸಬೇಕಾಗುತ್ತದೆ. 'ಹರಿ ಕೊಟ್ಟ ಕಾಲಕ್ಕೆ ಉಣ್ಣಬೇಕು, ಉಡಬೇಕು' ಎಂಬ ಮಾತಿನ ಅರ್ಥ–ಭೌತಿಕ ಬದುಕನ್ನು ಅದು ಕೈಗೆ ಸಿಕ್ಕಾಗ ಅನುಭೋಗಿಸಬೇಕು ಎಂದೇ ಆಗುತ್ತದೆ. ಬದುಕನ್ನು ಅಲೌಕಿಕದ ಹೆಸರಿನಲ್ಲಿ ನಿರಾಕರಿಸಬಾರದು; ಅದರ ಸಾರವನ್ನು ಸವಿಯಬೇಕು; ಕಾಲ ಮಿಂಚಿದ ನಂತರ ಕೇವಲ ನಿರಾಸೆ ಮಾತ್ರ ಉಳಿಯುತ್ತದೆ. ಅಂದರೆ ಸಂಪೂರ್ಣ ಭೋಗದಲ್ಲಿ ಮುಳಗಬೇಕು ಎಂದು ಅರ್ಥವಲ್ಲ. ಪ್ರಕೃತಿದತ್ತ ಸಂಪನ್ಮೂಲವನ್ನು ಪ್ರಕೃತಿ ನಿಯಮಕ್ಕನುಗುಣವಾಗಿ, ಮಿತಿಯಲ್ಲಿ ಬಳಸಿಕೊಳ್ಳಬೇಕು. ಆಗ ಬದುಕಿಗೊಂದು ಅರ್ಥ ಬರುತ್ತದೆ; ರುಚಿ ಸಾಧಿತವಾಗುತ್ತದೆ.

ಬದುಕು ಮಾಡುವುದು ಎಂದರೆ ಲೋಭತನವಲ್ಲ; ಅತಿ ಭೋಗವೂ ಅಲ್ಲ. ಇವೆರಡರ ನಡುವಿನ ಸುವರ್ಣ ನೆಲೆ. ಪ್ರತಿಯೊಂದು ಸಮಾಜವೂ ವ್ಯಕ್ತಿಯೂ ಮಿತಿಗುಳುಳ್ಳ ಸರಳ ಸಭ್ಯ ಜೀವನ ನಡೆಸುವುದನ್ನು ಪ್ರೀತಿ ಪೂರ್ವಕವಾಗಿ ಅಭ್ಯಾಸ ಮಾಡಿಕೊಳ್ಳಬೇಕು. ಇಲ್ಲದಿದ್ದಲ್ಲಿ ಜೀವನ ಎರಡು ಅತಿರೇಕಗಳ ನಡುವೆ ಸಿಲುಕಿ ನರಳುತ್ತದೆ. ಲೋಭಿ ನೆಲೆಯಲ್ಲಿ ಬದುಕು ಅರ್ಥ–ರಸ ರಹಿತ ಒಣ ಕಾಷ್ಠವಾದರೆ, ಭೋಗ ನೆಲೆಯಲ್ಲಿ ಅತಿಯಾದ ಸೇವನೆಯ ನೆಲೆಯಲ್ಲಿ ಬಹುಬೇಗ ಸವಿ ಕಳೆದುಕೊಂಡು ರೋಗ ಮೂಲವಾಗುತ್ತದೆ. ಹಾಗೆ ನೋಡಿದರೆ ಇವೆರಡೂ ರೋಗಕಾರಕಗಳೇ ಆಗಿವೆ. ಒಂದು ಮಾನಸಿಕ ರೋಗವಾದರೆ, ಮತ್ತೊಂದು ದೈಹಿಕ ರೋಗವಾಗಿ ಪರಿಣಮಿಸುತ್ತದೆ.

ದಾಸರು ಕೂಡಿಡುವುದನ್ನು ವಿರೋಧಿಸುವಂತೆ ಕಂಡರೂ ಅವರು ಅದಕ್ಕೆ ಸಂಪೂರ್ಣ ವಿರೋಧಿಗಳಲ್ಲ. ಹಿತಮಿತವಾಗಿ ವಿವೇಚನಾಯುತವಾಗಿ ಉಳಿಸಿ ಬಳಸಿದಲ್ಲಿ 'ಉಪ್ಪಿಲ್ಲದೆ ಉಣ್ಣುವ' ಮತ್ತು 'ಮೃತ್ತಿಕೆ' ತಿನ್ನುವ ಪ್ರಮೇಯ ಬರುವುದಿಲ್ಲ. ಆಧುನಿಕ ಅಸ್ತಿತ್ವವಾದದ ಸುಳಿವು ದಾಸರ ಮಾತಿನಲ್ಲಿ ತೋರುತ್ತದೆ. ಪರರ ಬದುಕಿಗೆ ಮಹತ್ವ ನೀಡುವುದರ ಜೊತೆ ಜೊತೆಯಲ್ಲಿಯೇ ಇಹದ ಬದುಕಿಗೂ ಅಷ್ಟೇ ಪ್ರಾಮುಖ್ಯತೆ ನೀಡಬೇಕು ಎಂಬುದು ಮುಖ್ಯ ಆಶಯ. ವಚನ ಚಳವಳಿಯ ಪ್ರಭಾವ ದಾಸರ ಮೇಲೆ ಆಗಿರುವುದಕ್ಕೆ ಇದೊಂದು ಪುಟ್ಟ ನಿದರ್ಶನ. ದೈವ ಸಂಕಲ್ಪ ಮತ್ತು ಭಗವಂತನ ನಿಯಾಮಕ ಸಿದ್ಧಾಂತದ ಮಧ್ವ ಸಿದ್ಧಾಂತದ ಅನುಯಾಯಿಗಳಾದರೂ ಕನಕ–ಪುರಂದರರು ಭೌತಿಕ ಬದುಕಿಗೆ, ಅದರ ಅರ್ಥವಂತಿಕೆಗೆ ಮಹತ್ವ ನೀಡಿದ್ದರು. ಲೋಭತನ ನೀರಸ ಬದುಕನ್ನು ಸೃಷ್ಟಿಸುತ್ತದೆ. ಭೋಗತನ ದುರಾಸೆ, ಕಬಳಿಕೆಯನ್ನು ರೂಢಿಸುತ್ತದೆ. ಇವೆರಡರಲ್ಲೂ ರಸಜೀವನವಿಲ್ಲ. ಬೇಂದ್ರೆ ಅವರು ತಿಳಿಸುವಂತೆ 'ಸಮರಸವೇ ಜೀವನ'ವಾಗಬೇಕಾದರೆ ಇವೆರಡರ ಸಮತೋಲನ ಸೃಷ್ಟಿಯಾಗಬೇಕು.

■ ಶಿಕಾಕು

## ಮಾತೇ ಮುತ್ತು

★ ಕನಸು ಕಾಣುವುದು ನಿಂತರೆ ಎಲ್ಲವೂ ನಿಂತಂತೆಯೇ.

–ಆಸ್ಟ್ರೇಲಿಯಾ ಗಾದೆ

★ ಇರಲು ಸ್ಥಳ ಕೊಡದವನು ಮುಂದೆ ಹೋಗುವ ದಾರಿ ತಿಳಿಸುವುದರಲ್ಲಿ ಗಟ್ಟಿಗನಾಗಿರುತ್ತಾನೆ.

–ಐರಿಶ್ ಗಾದೆ

★ ಕಣ್ಣುಗಳು ತಮ್ಮನ್ನು ತಾವೇ ನಂಬುತ್ತವೆ; ಕಿವಿಗಳು ಇತರರನ್ನು ನಂಬುತ್ತವೆ.

–ಜರ್ಮನಿ ಗಾದೆ

★ ಜೀವ ಇರುವವರೆಗೂ 'ನನ್ನ ಗತಿ ಮುಗಿಯಿತು' ಎಂದು ಯಾರೂ ಅಂದುಕೊಳ್ಳಬೇಕಿಲ್ಲ.

–ಏಂಜೆಲಿಕ್ ಲಾಮೂರ್

★ ಉಣಿಸುವ ಕೈಯನ್ನೇ ಕಚ್ಚುವ ಜನ ಸಾಮಾನ್ಯವಾಗಿ ಒದೆಯುವ ಬೂಟುಗಾಲನ್ನು ನೆಕ್ಕುತ್ತಾರೆ.

–ಎರ್ರಿಕ್ ಹಾಫರ್

★ ನೆಕ್ಕುವವನು ಕಚ್ಚಲೂಬಹುದು.

–ಫ್ರೆಂಚ್ ಗಾದೆ

★ ಜಡ ವಸ್ತುಗಳನ್ನು ಬಳಸಿಕೊಳ್ಳಬೇಕು; ಮನುಷ್ಯರನ್ನು ಪ್ರೀತಿಸಬೇಕು. ಆದರೆ ಜಗತ್ತಿನಲ್ಲಿ ಮನುಷ್ಯರನ್ನು ಬಳಸಿಕೊಳ್ಳುತ್ತಾರೆ; ಜಡವಸ್ತುಗಳನ್ನು ಪ್ರೀತಿಸುತ್ತಾರೆ.

–ತರಳಬಾಳು ಡಾ.ಶಿವಮೂರ್ತಿ ಸ್ವಾಮೀಜಿ

★ ನನ್ನ ತುಂಟಾಟ ಅಮ್ಮನಿಗೆ ಕಿರಿಕಿರಿ ಮಾಡುತ್ತಿತ್ತು; ಆದರೆ ನನಗೆ ಗೊತ್ತು, ಅದರಿಂದ ಅವಳಿಗೆ ತುಂಬ ಸಂತೋಷ ಆಗುತ್ತಿತ್ತು.

–ಮಾರ್ಕ್ ಟ್ವೇನ್

★ ಲೋಕ ವ್ಯವಹಾರವನ್ನು ತಿಳಿದವನೇ ಸರ್ವಜ್ಞ. ಹಾಗಲ್ಲದವನು ಎಷ್ಟು ಬುದ್ಧಿವಂತನಾದರೂ ಕಡೆಗಣಿಸಲ್ಪಟ್ಟಿದ್ದಾನೆ.

–ಆಚಾರ್ಯ ಸೋಮದೇವ

★ ಕಾಮಧೇನುವೆ ಇರಲಿ ಇಟ್ಟದ್ದೆಲ್ಲ ಅಮೃತವಲ್ಲ, ದೇವಕವಿ ಇರಲಿ ನುಡಿದದ್ದೆಲ್ಲ ಮಂತ್ರವಲ್ಲ.

–ಸುಜನಾ

★ ಎಣಿಸಲಾಗದ ಗುಣಿಸಲಾಗದ ದೂರ ಒಂದಿದೆ. ಅದು ಮನುಷ್ಯರ ಮನಸ್ಸಿನಲ್ಲಿರುವುದಕ್ಕೂ, ಅವರು ಮಾತನಾಡುವುದಕ್ಕೂ ಇರುವ ದೂರ. ಈ ದೂರ ಯಾರಿಗೂ ತಿಳಿಯದ ದೂರ.

–ಹಾ.ಮಾ.ನಾಯಕ

★ ತನ್ನ ಪ್ರೀತಿ ಮತ್ತು ದ್ವೇಷದಲ್ಲಿ ಬಲವಾಗಿಲ್ಲದ ಯಾವುದೇ ವ್ಯಕ್ತಿ ಉದಾತ್ತ ತತ್ವಗಳು ಮತ್ತು ತಾನು ಹೋರಾಡುತ್ತಿರುವ ಉದ್ದೇಶಗಳಿಗೆ ಪುಷ್ಟಿಯನ್ನು ನೀಡಲಾರ ಮತ್ತು ತನ್ನ ಯುಗದ ಮೇಲೆ ಪ್ರಭಾವ ಬೀರಲಾರ.

–ಬಿ.ಆರ್.ಅಂಬೇಡ್ಕರ್

★ ನಮಗೆಲ್ಲ ಅಧಿಕಾರ ಚಲಾಯಿಸುವುದರಲ್ಲಿ ಇರುವ ಆಸಕ್ತಿ ಇತರರಿಗೆ ಸುಖವನ್ನುಂಟು ಮಾಡುವ ವಿಷಯದಲ್ಲಿ ಇರುವುದಿಲ್ಲ.

–ಮಾಸ್ತಿ ವೆಂಕಟೇಶ ಅಯ್ಯಂಗಾರ್

★ ನಮ್ಮಲ್ಲಿ ನಮಗಿರುವ ಅಪನಂಬಿಕೆಯೇ ಘೋರವಾದ ಅಪನಂಬಿಕೆ.

–ಥಾಮಸ್ ಕಾರ್ಲೈಲ್